


## ಎಸ್. ಸುರೇಂದ್ರನಾಥ್

ಆಪ್ತವಲಯದಲ್ಲಿ ಸೂರಿ ಎಂದೇ ಕರೆಯಲ್ಪಡುವ ಎಸ್. ಸುರೇಂದ್ರನಾಥ್ ಹುಟ್ಟಿದ್ದು ಮೂಡುಬಿದಿರೆಯಲ್ಲಿ. ಓದಿದ್ದು ದಾವಣಗೆರೆಯಲ್ಲಿ. ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ತರಬೇತಿ ಪಡೆದಿದ್ದಾರೆ.

ಸಾಹಿತಿ ಎನ್ನುವುದಕ್ಕಿಂತ ಮೊದಲು ಇವರೊಬ್ಬ ನಾಟಕಕಾರ. ಬರವಣಿಗೆಗೆ ಕೈ ಹಾಕಿದ್ದು ಸ್ವಲ್ಪ ತಡವಾಗಿಯೇ. ಅನೇಕ ನಾಟಕಗಳನ್ನು ತಾವೇ ಬರೆದು ನಿರ್ದೇಶಿಸಿದ್ದಾರೆ. ಅವುಗಳಲ್ಲಿ 'ಹುಲಗೂರ ಹುಲಿಯವ್ವ', 'ಮರ್ಯಾದೆ ಪ್ರಶ್ನೆ', 'ನೀ ನಾನಾದ್ರೆ ನಾ ನೀನೇನಾ', 'ಜನತೆಯ ಶತ್ರು', 'ಒಂದು ಆಕಸ್ಮಿಕ ಸಾವು', 'ನಾ ತುಕಾರಾಮ್ ಅಲ್ಲ', 'ಸಂಕ್ರಮಣ', 'ಷೈಲಾಕ್', 'ಸರ್ಕಲ್ ಆಫ್ ಲೈಫ್' ಮುಖ್ಯವಾದವು. 'ನಾಗಮಂಡಲ', 'ಆತಂಕ', 'ಕಾನೂರು ಹೆಗ್ಗಡಿತಿ', 'ಕೆಂಡಸಂಪಿಗೆ' ಮುಂತಾದ ಚಲನಚಿತ್ರಗಳಿಗೆ ಕತೆ, ಚಿತ್ರಕತೆ ಮತ್ತು ಸಂಭಾಷಣೆ ಬರೆದಿದ್ದಾರೆ. ಅವರ 'ಕಟ್ಟು ಕತೆಗಳು', 'ತಾಪತ್ರಯ' ಎಂಬ ಕಥಾಸಂಕಲನಗಳು, 'ಎನ್ನ ಭವದ ಕೇಡು' ಮತ್ತು 'ಗಾಳಿಗೆ ಬಿದ್ದ ಚಂದ್ರನ ತುಂಡುಗಳು' ಕಾದಂಬರಿಗಳು ಪ್ರಕಟವಾಗಿವೆ. 13 ವರ್ಷ 'ಈಟೀವಿ' ಮುಖ್ಯಸ್ಥರಾಗಿದ್ದರು. ಪ್ರಸ್ತುತ ರಂಗಶಂಕರದ ನಿರ್ದೇಶಕ.

***ಹಸಿರಿಗೆ ತಿರುಗಿ ಒಂದೆರಡು ಸೆಕೆಂಡುಗಳು ಕಾದು, ಸದ್ಯಕ್ಕೆ ಅದು ಕೆಂಪಿಗೋ ಕೇಸರಿಗೋ ತಿರುಗುವುದಿಲ್ಲವೆಂದು ಖಾತ್ರಿ ಮಾಡಿಕೊಂಡೇ ರಸ್ತೆ ದಾಟುತ್ತಾರೆ. ದೀಪವಿಲ್ಲದ ರಸ್ತೆ ದಾಟುವುದಂತೂ ಇವರಿಗೆ ಹನುಮಂತ ಶರಧಿ ಲಂಘಿಸಿದ ಪರಿಗಿಂತಲೂ ಹೆಚ್ಚಿನ ತ್ರಾಸದಾಯಕವಾದದ್ದು. ರಸ್ತೆಯ ಈ ತುದಿಯಲ್ಲೂ ಆ ತುದಿಯಲ್ಲೂ ಯಾವುದೇ ವಾಹನ ಕಾಣಬಾರದು, ಕಂಡಲ್ಲಿ ಅದು ಹಾದು ಹೋಗುವ ತನಕ ಇವರು ಫುಟ್‌ಪಾತ್ ಬಿಟ್ಟು ಇಳಿಯುವುದಿಲ್ಲ. ಎಷ್ಟೋ ಸಾರಿ ಸಂಜೆಯವರೆಗೂ ರಸ್ತೆ ದಾಟಲು ಕಾದಿದ್ದಾರೆ.***

ಪಾತ್ರ ಪರಿಚಯದ ವಿವರಗಳು ಅತಿಯಾಯಿತೇನೋ ಅನ್ನುವಷ್ಟಿದ್ದರೂ, ಇಷ್ಟಾದರೂ ವಿವರಗಳಿಲ್ಲದೇ ಹೋದಲ್ಲಿ ನನ್ನ ಕತೆಗಳು ಮುಗ್ಗರಿಸುತ್ತವೆಂದೇ ನನ್ನ ನಂಬಿಕೆ, ಅಥವಾ ಅಂಜಿಕೆ. ಬಹುಶಃ ನಾನು ಹೆಚ್ಚಾಗಿ ಇಷ್ಟ ಪಟ್ಟು ಓದುವ ರಷ್ಯನ್ ಲೇಖಕರ ಪ್ರಭಾವವೂ ಇದಕ್ಕೆ ಕಾರಣವಿರಬಹುದು. ಅಲ್ಲಿನ ಕತೆಗಳಲ್ಲಿ ಎಷ್ಟು ವಿವರಗಳಿರುತ್ತವೆ ಎಂದರೆ ಯಾವುದೋ ಒಂದು ಪಾತ್ರ ಕೂತಿರುವ ಟೇಬಲ್ ಮೇಲಿನ ಬಿರುಕು, ಕೂತ ಕುರ್ಚಿಯ ಮೊಂಡಾದ ಕಾಲು, ಹಿಂದಿನ ಗೋಡೆಯ ಮೇಲಿರುವ ಲಡ್ಡಾದ ಮೊಳೆ, ಅದಕ್ಕೆ ನೇತುಹಾಕಿರುವ ಒಂದು ಮಾಸಲು ಚಿತ್ರ ಎಲ್ಲವೂ ನಮಗೆ ಕಾಣತೊಡಗುತ್ತವೆ.

ನಾನು ಹುಟ್ಟಿದ್ದು, ಬೆಳೆದದ್ದು ಮಧ್ಯಮವರ್ಗದ ಬ್ರಾಹ್ಮಣ ಕುಟುಂಬದಲ್ಲಿ. ಬೇರೆ ಸಮುದಾಯಗಳಿಗೆ ಸೇರಿದ ಮಿತ್ರರ ಜೊತೆ ಒಡನಾಟವಿದ್ದರೂ ಅವರ ವೈಯಕ್ತಿಕ ಜೀವನ,